**MVC 220/2025** **PW-1**

ದಿ:. 20.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು 3 ನೇ ಎದುರುದಾರರ ಪರ ಶ್ರೀ ಡಿ.ಸಿ.ಪಿ ವಕೀಲರಿಂದ</u>

1) ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಅಪಘಾತದ ಬಗ್ಗೆ ದೂರನ್ನು ನನ್ನ ಅಣ್ಣ ಹುಲುಗೇಶ ಕೊಟ್ಟಿದ್ದಾನೆ. ನನ್ನ ಅಣ್ಣ ಹುಲುಗೇಶ ನನಗೆ ಅಪಘಾತದ ಬಗ್ಗೆ ತಿಳಿಸಿದ್ದ. ನನ್ನ ಗಂಡನಿಗೆ ದ್ವಿ ಚಕ್ರ ಚಲಾಯಿಸಲು ಡಿಎಲ್ ಇರಲಿಲ್ಲ ಎಂದರೆ ಸರಿ. ಅಪಘಾತದಲ್ಲಿ ಒಳಗಾದ ದ್ವಿ ಚಕ್ರ ವಾಹನ ನನ್ನ ಚಿಕ್ಕಪ್ಪ ವೆಂಕಟೇಶರವರಿಗೆ ಸೇರಿದೆ. ನನ್ನ ಚಿಕ್ಕಪ್ಪ ಅವರ ದ್ವಿ ಚಕ್ರ ವಾಹನಕ್ಕೆ ಇನ್ಸೂರೆನ್ಸ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ದಿವಸ ನನ್ನ ಗಂಡ ದ್ವಿ ಚಕ್ರ ವಾಹನವನ್ನು ತೆಗೆದುಕೊಂಡು ದೇವಿನಗರ ಕ್ಯಾಂಪದಿಂದ ಇನ್ನೊಂದು ಕ್ಯಾಂಪ್ ಕಡೆ ಹೋಗುತ್ತಿದ್ದ. ಅಪಘಾತ ಆದಾಗ ಸಂಜೆ ಸುಮಾರು 07.00 ಗಂಟೆ ಆಗಿತ್ತು. ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದ. ನನ್ನ ಗಂಡನಿಗೆ ಕುಡಿಯುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ನನ್ನ ಗಂಡ ಡಿ.ಎಲ್ ಹೊಂದದೆ ಬೈಕನ್ನು ಅಜಾಗರುಕತೆಯಿಂದ ನಡೆಸಿ ತಾನೇ ಬೈಕನ್ನು ಬುಲೆರೋ ವಾಹನಕ್ಕೆ ಡಿಕ್ಕಿ ಹೊಡೆಸಿ ಅಪಘಾತ ಮಾಡಿದ್ದ ಎಂದರೆ ಸರಿಯಲ್ಲ.

2) ನನ್ನ ಗಂಡ ಹೆಲ್ಮೆಟ್ ಇಲ್ಲದೆ ಬೈಕ್ ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಅಪಘಾತದ ನಂತರ ನನ್ನ ಗಂಡನನ್ನು ತೆಕ್ಕಲಕೋಟೆ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಆಸ್ಪತ್ರೆಗೆ ಹೋಗುವಾಗಲೆ ನನ್ನ ಗಂಡ ಮೃತನಾಗಿದ್ದ. ನನ್ನ ಗಂಡನ ಮರಣೋತ್ತರ ಪರೀಕ್ಷೆ ಎಲ್ಲಿ ಮಾಡಲಾಗಿತ್ತು ನನಗೆ ಗೊತ್ತಿಲ್ಲ. ಪಿ.ಎಮ್ ವರದಿಯಲ್ಲಿ ನನ್ನ ಗಂಡ ಹೃದಯಾಘಾತದಿಂದ ಮರಣ ಹೊಂದಿದ್ದ ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಮರಣದ ಸಮಯದಲ್ಲಿ ಆತನಿಗೆ 28 ವರ್ಷ ಆಗಿತ್ತು. ನನ್ನ ಗಂಡನ ಅಂತ್ಯಸಂಸ್ಕಾರಕ್ಕೆ ರೂ.50,000/- ಖರ್ಚಾಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ 28 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ಆಧಾರ್ ಕಾರ್ಡ ಹಾಕಿದ್ದೇನೆ. ನಾನು ನನ್ನ ಇಬ್ಬರು ಮಕ್ಕಳು ನನ್ನ ಗಂಡನ ಜೊತೆ ವಾಸವಿದ್ದೆವು. ಮಹೇಂದ್ರ ಬುಲೆರೊ ಪಿಕ್ ಅಪ್ ವಾಹನಕ್ಕೆ ಅಪಘಾತದ ಸಮಯದಲ್ಲಿ ವಿಮೆ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ಸರಿ. ದೋಷಾರೋಪಣ ಪತ್ರದಲ್ಲಿ 3 ಜನರನ್ನು ಆರೋಪಿತರಾಗಿ ಮಾಡಲಾಗಿದೆ ಎಂದರೆ ಸರಿ. ಈ ಅರ್ಜಿಯಲ್ಲಿ ಇಬ್ಬರನ್ನು ಮಾತ್ರ ಪಾರ್ಟಿ ಮಾಡಿದ್ದೇನೆ ಎಂದರೆ ಸರಿ. ನನ್ನ ಚಿಕ್ಕಪ್ಪ ವೆಂಕಟೇಶನನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ.

**MVC 220/2025** **PW-1**

**3)** ಬೈಕಿಗೆ ಇನ್ಸೂರೆನ್ಸ ಇಲ್ಲದೇ ಇರುವ ಕಾರಣ ಪರಿಹಾರ ಪಡೆಯುವ ಉದ್ದೇಶದಿಂದ ಬೈಕ್ ಮಾಲಿಕರನ್ನು ಪಾರ್ಟಿ ಮಾಡದೆ ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಬೈಕ್ ಮಾಲಕ ಈ ಅರ್ಜಿಗೆ ಅವಶ್ಯಕ ಪಕ್ಷಗಾರ ಎಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .)

ಓ .ಹೇ.ಕೆ.ಸರಿ ಇದೆ .

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ .